(ಶ್ರೀ ಎಚ್. ಡಿ. ದೇವೇಗೌಡ)

ಮತ್ತೊಂದು ಗಹನವಾದ ಆರೋಪವನ್ನು ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಹಣವನ್ನು ದುರ್ವ್ಯವಹಾರ ಮಾಡಲಿಕ್ಕೆ ಕಾರಣನಾದ ಅಧಿಕಾರಿಯನ್ನು ನಾನು ಮನೆಗೆ ಕಳುಹಿಸಬಹುದಾಗಿತ್ತು ಎಂದು ಹೇಳಿದ್ದಾರೆ. ಆ ಸಂಸ್ಥೆಯಲ್ಲಿರುವ ಹಣಕಾಸಿನ ಬಗ್ಗೆ ನಮಗೂ ಅನಕ್ಕೆ ಇದೆ. ಇದರ ಬಗ್ಗೆ ವಿವರಗಳನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ಕೊಡಬೇಕು. ಆ ಅಧಿಕಾರಿ ಏನೇನು ಅವ್ಯವಹಾರ ಮಾಡಿದ್ದಾರೆ ಎನ್ನುವುದರ ಬಗ್ಗೆ ಸಭೆಗೆ ವಿವರಣೆ ಕೊಡಬೇಕು. ಶ್ರೀ ಅರ್ಮುಗಂ ಅವರು ಮಾಡಿರುವ ಆರೋಪದ ಬಗ್ಗೆ ನಮಗೆ ಅವಕಾಶ ಸಿಕ್ಕಿದಾಗ ಮಾತನಾಡೋಣ. ಆದರೆ ಈ ವಿಚಾರದ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಸೂಕ್ತ ಸಮಯದಲ್ಲಿ ಸ್ಪಷ್ಟೀಕರಣ ಮಾಡುತ್ತೇನೆ

Speaker to examine notices given under Rule 312.

ಶ್ರೀ ಎಸ್. ಬಂಗಾರಪ್ಪ.—ರೂಲ್ 312ರ ಪ್ರಕಾರ ನಾನು ಈ ಹೊತ್ತು ಒಂದು ಸೂಚನೆಯನ್ನು ಕಳುಹಿಸಿದ್ದೆ. .....

ಅಧ್ಯಕ್ಷರು.—ನಾನು ಆಫೀಸಿನಲ್ಲಿ ಇರುವವರೆಗೂ ಬಂದಿರಲಿಲ್ಲ. ಅದು ಬರಲಿ, ನಾನು ನೋಡುತ್ತೇನೆ. ಅಲ್ಲದೆ ಶ್ರೀ ಮಾನ್ ಪುಟ್ಟಸ್ವಾಮಿಯವರು ಎಕ್ಸ್‌ಟೆಂಥ್ ಒಂದು ಪಾಯಿಂಟ್ ಆಫ್ ಆರ್ಡರಿಗೆ ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ.

Sri S. BANGARAPPA.—Tomorrow shall I expect ? Now I will explain the matter.

MADAM SPEAKER.—He cannot do that. Let me see it first as to what it is.

Non-issue of Passes and incidents in the Public Gallery

ಶ್ರೀ ವಾಟಾಳ್ ನಾಗರಾಜ.—ನನ್ನ ಹೆಸರಿನಲ್ಲಿ, ಶ್ರೀ ಕೋಣಂದೂರು ಲಿಂಗಪ್ಪನವರ ಹೆಸರಿನಲ್ಲಿ, ಶ್ರೀ ಕಾಗೋಡು ತಿಮ್ಮಪ್ಪನವರ ಹೆಸರಿನಲ್ಲಿ ಯಾರು ಬರೆದು ಕಳುಹಿಸಿದರೂ ಪಾಸ್‌ಗಳನ್ನು ಕೊಡಬಾರದೆಂದು ಮಾರ್ಷಲ್ ಶಾಸ್ತ್ರಿ ಅವರು ಆರ್ಡರ್ ಮಾಡಿದ್ದಾರೆ. ನಮ್ಮ ಕಡೆಯವರಿಗೆ ಅಪಮಾನ ಅವಹೇಳನ ಮಾಡಿದ್ದಾರೆ. ಶಾಸ್ತ್ರಿ ಅವರು ಈ ರೀತಿ ನಾವು ನಾಲ್ಕೈದು ಜನ ಬರೆದು ಕಳುಹಿಸಿದರೆ ಪಾಸುಗಳನ್ನು ಕೊಡಬಾರದೆಂದು ಹೇಳುವುದಕ್ಕೆ ನಾವು ಏನು ಅಪರಾಧ ಮಾಡಿದ್ದೇವೆ ? ಅವರನ್ನು ಸಭೆಗೆ ಕರೆಸಿ ಇಲ್ಲದೆ ಇದ್ದರೆ ಅವರಿಗೆ ತಕ್ಕ ಶಿಕ್ಷೆ ಮಾಡಬೇಕು ನಮ್ಮ ಹೆಸರಿನಲ್ಲಿ ಪಾಸುಗಳು ಹೋದರೆ ಯಾರನ್ನೂ ಬಿಡಬೇಡಿ ಎನ್ನುವ ಮೇಲ್ಮಟ್ಟದ ಧ್ವನಿಯಲ್ಲಿ ಮಾತನಾಡತಕ್ಕದ್ದು ಏನು ?

Sri C. M. ARUMUGHAM.—Before the Chair gives a Ruling I would like to make one submission. The regulation of the visitors to this House is, of course, under the control of the Speaker. But then, nowhere in this country both in the Parliament as well as in several States, has the Marshal anything to do with the regulation of the visitors. Only here we have to go to the Marshal ; the Marshal should give a letter, we must then go to a clerk and the clerk issues the visitor's card. I submit that nowhere in the State Assembly or the Parliament—has this Marshal got any power of authorising or directing or issuing the passer, Therefore, I submit that this power must be